ದೇವಾಲಯಗಳಿಗೆ ಅನುದಾನ

1163 (1816); ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್

ಅ) ಬೆಳಗಾವಿ ಜಿಲ್ಲೆಯ ಎಷ್ಟು ದೇವಾಲಯಗಳು 'ಎ' ಮತ್ತು 'ಬಿ' ವಿಭಾಗಗಳಲ್ಲಿ ಬರುತ್ತವೆ; ಅವು ಯಾವುವು (ತಾಲ್ಲೂಕುವಾರು ವಿವರ ನೀಡುವುದು);

ಆ) ನಿಪ್ಪಾಣಿ ಮತಕ್ಷೇತ್ರದ ಬಹಳಷ್ಟು ದೇವಾಲಯಗಳು ಅತ್ಯಂತ ಪುರಾತನ ಹಾಗೂ ಧಾರ್ಮಿಕ ಹಿನ್ನೆಲೆಯುಳ್ಳದಾಗಿದ್ದು, ಇವುಗಳ ಜೀರ್ಣೋದ್ಧಾರ ಮತ್ತು ಅಭಿವೃದ್ಧಿ ಮಾಡಲು ಸರ್ಕಾರ ವಿಶೇಷ ಅನುದಾನವನ್ನು ನೀಡುವುದೇ; ಹಾಗಿದ್ದಲ್ಲಿ, ಯಾವಾಗ ನೀಡಲಾಗುವುದು?

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನಾ ಮತ್ತು ಮುಜರಾಯಿ ಸಚಿವರು)

ಅ) ಬೆಳಗಾವಿ ಜಿಲ್ಲೆಯಲ್ಲಿ ಮುಜರಾಯಿ ಇಲಾಖಾ ವ್ಯಾಪ್ತಿಗೆ ಒಳಪಡುವ 'ಎ' ಪ್ರವರ್ಗದ 5 ಮತ್ತು 'ಬಿ' ಪ್ರವರ್ಗದ 5 ದೇವಾಲಯಗಳು ಇರುತ್ತವೆ. ವಿವರ ಈ ಕೆಳಕಂಡಂತಿದೆ:–

'ಎ' ಶ್ರೇಣಿ ದೇವಸ್ಥಾನಗಳು		
ಕ್ರ. ಸಂ	ತಾಲ್ಲೂಕು	ದೇವಸ್ಥಾನದ ಹೆಸರು ಮತ್ತು ಗ್ರಾಮ
1	ಸವದತ್ತಿ	ಶ್ರೀ ರೇಣುಕಾ ಯಲ್ಲಮ್ಮಾ ದೇವಸ್ಥಾನ ಯಲ್ಲಮ್ಮನ ಗುಡ್ಡ
2	ರಾಯಬಾಗ	ಶ್ರೀ ಮಹಾಕಾಳಿ ಮಾಯಕ್ಕ ದೇವಸ್ಥಾನ ಚಿಂಚಲಿ
3	ಬೆಳಗಾವಿ	ಶ್ರೀ ದತ್ತ ದೇವಸ್ಥಾನ ಪಂತಬಾಳೆಕುಂದ್ರಿ
4	ಬೆಳಗಾವಿ	ಶ್ರೀ ಪರಮಾರ್ಥನೀಕೇತನ (ಹರಿಮಂದಿರ) ಟಿಳಕವಾಡಿ ಬೆಳಗಾವಿ

5	ರಾಮದುರ್ಗ	ಶ್ರೀ ವೀರಭದ್ರೇಶ್ವರ ದೇವಸ್ಥಾನ, ಗೊಡಚಿ
		'ಬಿ' ಶ್ರೇಣಿಯ ದೇವಸ್ಥಾನಗಳು
1	ಬೆಳಗಾವಿ	ಶ್ರೀ ಸಾಯಿ ಮಂದಿರ, ಸಾಯಿ ಸಮಾಜ ಟಿಳಕವಾಡಿ ಬೆಳಗಾವಿ
2	ಬೆಳಗಾವಿ	ಶ್ರೀ ವೀರಭದ್ರೇಶ್ವರ ದೇವಸ್ಥಾನ ವೀರಭದ್ರ ನಗರ ಪೊಲೀಸ್ ಹೆಡ್ ಕ್ವಾಟರ್ಸ ಬೆಳಗಾವಿ
3	ಬೆಳಗಾವಿ	ಕಪಿಲೇಶ್ವರ ದೇವಸ್ಥಾನ ಕಪಿಲೇಶ್ವರ ಗಲ್ಲಿ ಬೆಳಗಾವಿ
4	ಬೆಳಗಾವಿ	ಶ್ರೀ ಸಮಾದೇವಿ ದೇವಸ್ಥಾನ ಸಮಾದೇವಿ ಗಲ್ಲಿ ಬೆಳಗಾವಿ
5	ರಾಮದುರ್ಗ	ಶ್ರೀ ವೀರಭದ್ರೇಶ್ವರ ದೇವಸ್ಥಾನ, ಗೊಡಚಿ

ಆ) ನಿಪ್ಪಾಣಿ ಮತಕ್ಷೇತ್ರದ ದೇವಾಲಯಗಳ ಜೀರ್ಣೋದ್ಧಾರ, ಅಭಿವೃದ್ಧಿಗಾಗಿ ಕಳೆದ 3 ವರ್ಷಗಳಲ್ಲಿ ₹ 4,04,00,000/– ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ

ಅನುದಾನ ಕೋರಿ ಸ್ವೀಕೃತವಾಗುವ ಮನವಿಗಳನ್ನು ಅನುದಾನದ ಲಭ್ಯತೆಗನುಗುಣವಾಗಿ ಬಿಡುಗಡೆ ಮಾಡಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತದೆ.